# ನಡೆದುಬಂದ ದಾರಿಯ ಕಡೆಗೆ ಹೊರಳಲಿ ಕಣ್ಣು...



ಪರಮೇಶ್ ಡಿ. ಜೋಳದ

ಸೃಜನಶೀಲತೆಯ ಮೂಲ ಆಶಯವೂ ಅಮೃತಕ್ಕೆ ಹಾರುವ ಗರುಡನ ಎದೆಮಿಡಿತವೂ ಒಂದೇ ಎನ್ನುವುದನ್ನು ಯಾರು ತಾನೇ ಒಪ್ಪುವುದಿಲ್ಲ? ಏನನ್ನಾದರೂ ಹೇಳುವ, ಮತ್ತು ಆ ಮೂಲಕ ಹೊಸತೇನನ್ನಾದರೂ ಸೃಜಿಸುವ ಹಂಬಲವೇ ಬದುಕನ್ನು ಸದಾ ಬೆಚ್ಚಗಿಡುತ್ತದೆ. ಅಕ್ಷರಗಳ ಗುರಿ ಅಮೃತತ್ವ ಎಂಬ ಆಲೋಚನೆಯೇ ಜಗತ್ತಿನಲ್ಲಿ ಬರವಣಿಗೆಯ ಹಿಂದಿರುವ ಪ್ರೇರಣೆ. ಹಾಡು ಇಲ್ಲದೇ ಹೋಗಿದ್ದರೆ ಮನುಷ್ಯನ ಪಾಡು ಏನಾಗಿರುತ್ತಿತ್ತು!

ಆದರೆ ಬದುಕಿನ ಶೋಧಕ್ಕೆ ಅದೊಂದೇ ಸಾಲುವುದಿಲ್ಲ. ಭಾವನೆಯ ಜೊತೆಗೆ ಶೋಧನೆಯೂ ಅಗತ್ಯ. ಎಲ್ಲ ಸಂಸ್ಕೃತಿಗಳಲ್ಲಿ, ಎಲ್ಲ ಕಾಲಗಳಲ್ಲಿ, ಸೃಜನಶೀಲ ಬರಹಗಾರರು ಅಪಾರವಾಗಿದ್ದರೆ, ಸಂಶೋಧಕರು ಮಾತ್ರ ಅಪರೂಪವಾಗಿ ಇರುತ್ತಾರೆ ಎನ್ನುವುದು ನಮಗೆ ಗೊತ್ತು. ನಡೆದುಬಂದ ದಾರಿಯಲ್ಲಿ ಕಣ್ಣು ಹೊರಳಿಸುವ ಸಂಶೋಧಕರು ಕಾಲ ಹೊದಿಸಿದ ಮುಸುಕುಗಳನ್ನು ತೆರೆದು ನಡೆದುದನ್ನು ಸರಿಯಾಗಿ ಗ್ರಹಿಸುತ್ತಾರೆ. ಅವುಗಳ ಆಧಾರದ ಮೇಲೆ ಇತಿಹಾಸವನ್ನು ರಚಿಸುತ್ತಾರೆ. ಇದು ಆಗಲೇಬೇಕಾದ ಅಮೂಲ್ಯ ಕಾರ್ಯ. ಆದರೆ ಹಳೆಯದನ್ನು ಶೋಧಿಸುವ ಕಾರ್ಯದಲ್ಲಿ ಹೊಸ ತಲೆಮಾರು ಆಸಕ್ತಿ ವಹಿಸುತ್ತಿಲ್ಲ ಎನ್ನುವ ಆತಂಕ ಮೂಡುತ್ತಿದೆ. ಸಾಹಿತ್ಯದಷ್ಟು ಜನಪ್ರಿಯವಲ್ಲದ ಸಂಶೋಧನಾ ಕ್ಷೇತ್ರಕ್ಕೆ ವಿದ್ಯಾರ್ಥಿಗಳನ್ನು ಸೆಳೆಯುವುದು ಸುಲಭವಲ್ಲ. ಹೊಸ ವಿದ್ವಾಂಸರು, ಹುರುಪಿನ ಸಂಶೋಧಕರ ಸಮೂಹವನ್ನು ರೂಪಿಸುವ ಯಾವ ಪ್ರಯತ್ನಗಳೂ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಆಗುತ್ತಿಲ್ಲ. ಇದಕ್ಕೆ ವಿಶೇಷ ಗಮನ ಹರಿಸದಿದ್ದರೆ, ನಮಗೆ ನಮ್ಮ ಬಗ್ಗೆ ತಿಳಿದಿರುವುದಕ್ಕಿಂತ ತಿಳಿಯದಿರುವುದೇ ಹೆಚ್ಚು ಉಳಿದುಬಿಡುತ್ತದೆ. ಏಕೆಂದರೆ, ನಿನ್ನೆಗಳ ಬೆಳಕು ಹಾಯಿಸಿಕೊಳ್ಳದಿದ್ದರೆ ನಾಳೆಗಳು ನಿಚ್ಚಳವಾಗಿ ಕಾಣುವುದಿಲ್ಲ.

**–ಆರ್. ಪೂರ್ಣಿಮಾ**